**ದಿಃ 19-08-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 2ನೇ ಎದುರುದಾರರ ಪರವಾಗಿ ಶ್ರೀ ಎನ್ ಪಿ ಎನ್ ವಕೀಲರಿಂದ**

ನಾನು 5ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಅಪಘಾತದ ದಿವಸ ನಾನು ಚಲಾಯಿಸುತ್ತಿದ್ದ ಮೋಟಾರು ಸೈಕಲು ಕೆಎ-20-ಇಎಂ-7327 ಇದು ನನ್ನ ಸ್ವಂತ ಮೋಟಾರು ಸೈಕಲು ಆಗಿತ್ತು. ಸದ್ರಿ ಮೋಟಾರು ಸೈಕಲು ಚಲಾಯಿಸಲು ನನಗೆ ವಾಹನ ಚಾಲನಾ ಪರವಾನಿಗೆ ಪತ್ರ ಇದೆ. ಮತ್ತು ನನ್ನ ವಾಹನಕ್ಕೆ ವಿಮಾ ಪಾಲಿಸಿ ಇದ್ದ ಬಗ್ಗೆ ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲಾ.

ಅಪಘಾತದ ಬಗ್ಗೆ ಫಿರ್ಯಾದಿ ನನ್ನ ಹೆಂಡತಿ ನೀಡಿರುತ್ತಾರೆ. ಅಪಘಾತದ ದಿನ ನಾನು ನಡುಮನೆಯಿಂದ ಸಿರಿಮನೆಗೆ ನನ್ನ ಹೆಂಡತಿ ಜೊತೆಯಲ್ಲಿ ಪ್ರಯಾಣ ಮಾಡುತ್ತಿದ್ದೆ. ಅಪಘಾತವು ಬ್ರಹ್ಮಾವರದಿಂದ ಮಂದಾರ್ತಿಗೆ ಹೋಗುವ ರಸ್ತೆಯ ಮಧ್ಯಭಾಗದಲ್ಲಿ ಆಗಿತ್ತು ಎಂದರೆ ಸಾಕ್ಷಿ ಸರಿ ಅಲ್ಲಾ ಅದು ರಸ್ತೆಯ ಎಡಭಾಗದಲ್ಲಿ ಆಗಿತ್ತು ಅಂತ ನುಡಿಯುತ್ತಾರೆ. ಅಪಘಾತದ ಸ್ಥಳದಲ್ಲಿ ಮೂರು ರಸ್ತೆ ಸೇರುವ ಜಂಕ್ಷನ್ ಇದೆ ಎಂದರೆ ಸರಿ. ನಿಪಿ-4 ನಕ್ಷೆ ಸರಿ ಇದೆ. ರಸ್ತೆಯ ಮಧ್ಯಭಾಗದಲ್ಲಿ ಆಗಿದೆ ಅಂತ ನಕ್ಷೆಯಲ್ಲಿ ಕಾಣಿಸಿದ್ದಾರೆ ಎಂದರೆ ಸರಿ ಅಲ್ಲಾ. ಕಾರಿನ ಮುಂಭಾಗದ ನನ್ನ ವಾಹನದ ಬಲಬದಿಗೆ ತಾಗಿತು. ನಾನೇ ನನ್ನ ಮೋಟಾರು ಸೈಕಲನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ಕಾರಿನ ಎಡಭಾಗಕ್ಕೆ ಗುದ್ದಿ ಅಪಘಾತಪಡಿಸಿದ್ದೇನೆ ಎಂದರೆ ಸರಿ ಅಲ್ಲಾ . ಕಾರಿನ ಚಾಲಕ ಸರಿಯಾಗಿ ಸೂಚನೆ ನೀಡಿ ಮಂದಾರ್ತಿಯಿಂದ ಜಾನುವಾರು ಕಟ್ಟೆಗೆ ತಿರುಗುತ್ತಿರುವಾಗ ನಾನೇ ಕಾರಿನ ಎಡಭಾಗಕ್ಕೆ ಹೋಗಿ ಗುದ್ದಿ ಈ ಅಪಘಾತಪಡಿಸಿಕೊಂಡಿದ್ದೇನೆ ಎಂದರೆ ಸರಿ ಅಲ್ಲಾ. ಸಾಕ್ಷಿ ಕಾರಿನ ಚಾಲಕ ಯಾವುದೇ ಸೂಚನೆ ಕೊಡದೇ ಒಮ್ಮೆಲೇ ಕಾರನ್ನು ತಿರುಗಿಸಿದ್ದರಿಂದ ಕಾರು ನನ್ನ ಬೈಕಿಗೆ ಗುದ್ದಿ ನಾನು ನೆಲದ ಮೇಲೆ ಬಿದ್ದೆ ಅಂತ ನುಡಿಯುತ್ತಾರೆ. ಅಪಘಾತವು ನನ್ನ ತಪ್ಪಿನಿಂದಲೇ ಆಗಿದ್ದರೂ ಸಹಾ ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

ಅಪಘಾತದಲ್ಲಿ ಆದಂತಹಾ ಗಾಯಕ್ಕೆ ಸಂಪೂರ್ಣವಾದ ಚಿಕಿತ್ಸೆ ನಾನು ಕೆಎಂಸಿ ಆಸ್ಪತ್ರೆಯಲ್ಲಿ ಪಡೆದುಕೊಂಡಿದ್ದೇನೆ. ನನಗೆ ಚಿಕಿತ್ಸೆ ನೀಡಿದ ವೈದ್ಯರು ಒಂದೂವರೆ ವರ್ಷ ವಿಶ್ರಾಂತಿ ಪಡೆದುಕೊಳ್ಳಬೇಕೆಂದು ಸೂಚಿಸಿದ್ದರು ಎಂದರೆ ಸರಿ ಅಲ್ಲಾ. ಆ ಬಗ್ಗೆ

ಯಾವುದೇ ದಾಖಲೆಯಲ್ಲಿ ಕಾಣಿಸಿಲ್ಲ ಎಂದರೆ ಸರಿ ಅಲ್ಲಾ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಷ್ಟು ಹಣ ನನ್ನ ಔಷಧಿಗೆ, ಪ್ರಯಾಣಕ್ಕೆ ಪೌಷ್ಠಿಕ ಆಹಾರಕ್ಕೆ ಮತ್ತು ಪರಿಚಾರಕರಿಗೆ ಖರ್ಚು ಮಾಡಿಲ್ಲ ಎಂದರೆ ಸರಿ ಅಲ್ಲಾ.

ನಾನು ಅಪಘಾತ ಪೂರ್ವದಲ್ಲಿ ರಬ್ಬರ್ ಟ್ಯಾಪಿಂಗ್ ಕೆಲಸವನ್ನು ಮಾಡುತ್ತಿದ್ದೆ ಎನ್ನುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿಲ್ಲ. ನಾನು ಯಾವತ್ತೂ ರಬ್ಬರ್ ಟ್ಯಾಪಿಂಗ್ ಕೆಲಸ ಮಾಡಿಲ್ಲ ಆ ಕಾರಣದಿಂದ ನಾನು ಯಾವುದೇ ದಾಖಲಾತಿ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ ಅಲ್ಲಾ. ಅಪಘಾತ ಪೂರ್ವದಲ್ಲಿ ನನಗೆ ನಾನು ಹೇಳಿದಷ್ಟು ತಿಂಗಳಿಗೆ ರೂ:**25,000-00** ಆದಾಯ ಇರಲಿಲ್ಲ ಎಂದರೆ ಸರಿ ಅಲ್ಲಾ. ನನಗೆ ಯಾವುದೇ ವೈದ್ಯರು ಕೆಲಸ ಮಾಡಬಾರದು ಅಂತ ಬರೆದುಕೊಟ್ಟಿಲ್ಲ ಎಂದರೆ ಸಾಕ್ಷಿ ನನಗೆ ಈಗ ಯಾವುದೇ ಕೆಲಸ ಮಾಡಲಿಕ್ಕೆ ಆಗುತ್ತಿಲ್ಲ ಅಂತ ನುಡಿಯುತ್ತಾರೆ. ನನಗೆ ಅಪಘಾತದಿಂದ ನನ್ನ ಸಾಕ್ಷಿಯಲ್ಲಿ ಹೇಳಿದಷ್ಟು ಅಂಗನ್ಯೂನ್ಯತೆ ಆಗಿಲ್ಲ ಮತ್ತು ನಾನು ಹೇಳಿದಷ್ಟು ಆರ್ಥಿಕ ನಷ್ಟ ನನಗೆ ಆಗಿಲ್ಲ ಎಂದರೆ ಸರಿ ಅಲ್ಲಾ. ಅಪಘಾತ ನನ್ನ ತಪ್ಪಿನಿಂದ ಆಗಿದ್ದರೂ ಸಹಾ ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**ಮರು ವಿಚಾರಣೆ:** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**